ಸಮಸ್ತ ಕನ್ನಡಿಗರ ಏಕೈಕ ಸಂಜೆ ದಿನಪತ್ರಿಕೆ

ಈ ಸಂಜೆ

ಕನ್ನಡ ಸಂಜೆ ದಿನಪತ್ರಿಕೆ

Saturday 23rd December 2017

# ನಾಲ್ಕನೇ ಕೈಗಾರಿಕಾ ಕ್ರಾಂತಿ ಸವಾಲು ಎದುರಿಸಲು ಸನ್ನದ್ಧರಾಗಿ

**ಕೆಂಗೇರಿ, ಡಿ.23-** ಮುಂದೆ ಎದುರಾಗಬಹುದಾದ ಪ್ರಪಂಚದ ನಾಲ್ಕನೆ ಕೈಗಾರಿಕ ಕ್ರಾಂತಿಯ ಸವಾಲುಗಳನ್ನು ಎದುರಿಸಲು ನಾವೆಲ್ಲ ಪರಿಪೂರ್ಣ ಮಾಹಿತಿ ಹಾಗೂ ಜ್ಞಾನದ ಅರಿವಿನ ಮೂಲಕ ಸನ್ನದ್ಧರಾಗಬೇಕಾಗಿದೆ ಎಂದು ಅಮೆರಿಕ ಮಿಯಾಮಿ ಫ್ಲೋರಿಡಾ ಅಂತಾರಾಷ್ಟ್ರೀಯ ವಿಶ್ವ ವಿದ್ಯಾಲಯದ ಡಾ.ಎಸ್.ಎಸ್. ಅಯ್ಯಂಗಾರ್ ತಿಳಿಸಿದರು.



ಮೈಸೂರು ರಸ್ತೆಯ ಆರ್.ವಿ.ತಾಂತ್ರಿಕ ಮಹಾವಿದ್ಯಾಲಯದಲ್ಲಿ ಕಂಪ್ಯೂಟರ್ ಸೈನ್ಸ್ ಮಾಹಿತಿ ತಂತ್ರಜ್ಞಾನ ಹಾಗೂ ಎಂ.ಸಿ.ಎ. ವಿಭಾಗಗಳ ಸಂಯುಕ್ತ ಆಶ್ರಯದಲ್ಲಿ ಕಂಪ್ಯೂಟೇಷನಲ್ ಸಿಸ್ಟಮ್ಸ್ ಅಂಡ್ ಇನ್ಫರ್ಮೇಷನ್ ಟೆಕ್ನಾಲಜಿ ಫಾರ್ ಸಸ್ಟೈನಬಲ್ ಸಲ್ಯೂಷನ್ಸ್ ಕುರಿತಾದ ಎರಡನೇ ಅಂತರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಪಾಲ್ಗೊಂಡು ಮಾತನಾಡಿದ ಅವರು ಕೃತಕ ಬುದ್ಧಿವಂತಿಕೆಯಿಂದ ನಾವು ಏನನ್ನು ಸಾಧಿಸಲಾಗದು. ಸ್ಪರ್ಧಾತ್ಮಕ ಹಾಗೂ ಆಧುನಿಕತೆಗೆ ತಕ್ಕಂತೆ ಕೌಶಲ್ಯಾಭಿವೃದ್ಧಿ ತರಬೇತಿ ಪಡೆಯುವ ಮೂಲಕ ತಂತ್ರಜ್ಞಾನದ ಆವಿಷ್ಕಾರಕ್ಕೆ ಮುಂದಾಗಬೇಕೆಂದು ಕರೆ ನೀಡಿದರು.

ರಾಷ್ಟ್ರೀಯ ಶಿಕ್ಷಣ ಸಮಿತಿ ಟ್ರಸ್ಟ್‌ನ ಅಧ್ಯಕ್ಷ ಡಾ.ಎಂ.ಕೆ.ಪಾಂಡುರಂಗ ಶೆಟ್ಟಿ ಮಾತನಾಡಿ, ಇಂತಹ ವಿಚಾರ ಸಂಕಿರಣಗಳಿಂದಾಗಿ ತಾಂತ್ರಿಕ ಆವಿಷ್ಕಾರಗಳ ಬಗ್ಗೆ ಮಾಹಿತಿ ದೊರೆತು ಇನ್ನು ಹೆಚ್ಚಿನ ಸಂಶೋಧನೆಗೆ ಪ್ರೇರಣೆಯಾಗುತ್ತದೆ ಎಂದರು.

ಇದೇ ವೇಳೆ ಅಮೆರಿಕ ಮಿಯಾಮಿ ಫ್ಲೋರಿಡಾ ಅಂತಾರಾಷ್ಟ್ರೀಯ ವಿಶ್ವವಿದ್ಯಾಲಯದೊಂದಿಗೆ ಆರ್.ವಿ. ತಾಂತ್ರಿಕ ಮಹಾ ವಿದ್ಯಾಲಯ ಶಿಕ್ಷಣ, ಸಂಶೋಧನೆ ಹಾಗೂ ತಂತ್ರಜ್ಞಾನದ ವಿನಿಮಯಕ್ಕಾಗಿ ಒಡಂಬಡಿಕೆ ಮಾಡಿಕೊಳ್ಳಲಾಯಿತು.

ಅಮೆರಿಕ ಒಕ್ಲೋಹೋಮ ವಿಶ್ವವಿದ್ಯಾಲಯದ ಸಂಶೋಧಕ ಎಸ್.ಲಕ್ಷ್ಮಿವರಹನ್, ಆರ್.ವಿ. ತಾಂತ್ರಿಕ ಮಹಾ ವಿದ್ಯಾಲಯದ ಪ್ರಾಂಶುಪಾಲ ಡಾ.ಕೆ.ಎನ್. ಸುಬ್ರಮಣ್ಯ, ಶೈಕ್ಷಣಿಕ ಡೀನ್ ಡಾ.ಶ್ರೀನಾಥ್ ಎನ್.ಕೆ., ವಿಚಾರ ಸಂಕಿರಣ ಪ್ರಧಾನ ಸಂಚಾಲಕಿ ಡಾ.ಶೋಭ.ಜಿ ಹಾಗೂ ವಿವಿಧ ವಿಭಾಗಗಳ ಮುಖ್ಯಸ್ಥರು ಪಾಲ್ಗೊಂಡಿದ್ದರು.